ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 730

ಸದಸ್ಯರ ಹೆಸರು : ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 20-12-2021.

ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಗ್ರಾಮೀಣ ಭಾಗದ ಕಲೆಗಳು ಮತ್ತು ಈ ಕಲೆಗಳನ್ನು ಪ್ರಚಾರ ಮಾಡುವ ಕಲಾವಿದರನ್ನು ಗುರುತಿಸಿ ಇವರಿಗೆ ಮನ್ನಣೆ ನೀಡದಿರುವುದರಿಂದ ಗ್ರಾಮೀಣ ಭಾಗದ ಕಲೆಗಳು ಅವಸಾನದ ಅಂಚಿಗೆ ತಲುಪುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ; ಹಾಗಿದ್ದಲ್ಲಿ, ಗ್ರಾಮೀಣ ಭಾಗದ ಕಲೆಗಳನ್ನು ಜೀವಂತವಾಗಿರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಬಂದಿರುವುದಿಲ್ಲ.<br>ಸಂಘ-ಸಂಸ್ಥೆಗಳು ಆಯೋಜಿಸುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ಗ್ರಾಮೀಣ ಭಾಗದ ಕಲೆ ಮತ್ತು ಕಲಾ ತಂಡಗಳನ್ನು ಪ್ರಾಯೋಜನೆ ಕೋರಿ ಸೇವಾ ಸಿಂಧು ಮೂಲಕ ಅರ್ಜಿ ಸಲ್ಲಿಸಿದಲ್ಲಿ ನಿಯಮಾನುಸಾರ ಪರಿಶೀಲಿಸಿ ಹೋಬಳಿ/ಗ್ರಾಮೀಣ ಭಾಗದ ಕಲಾತಂಡಗಳನ್ನು ಪ್ರಾಯೋಜನೆ ನೀಡಲಾಗುತ್ತಿದೆ ಹಾಗೂ ಇಲಾಖೆಯಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ಗ್ರಾಮೀಣ ಕಲಾ ತಂಡಗಳಿಗೆ ಅವಕಾಶ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. |
| ಆ | ಗ್ರಾಮೀಣ ಭಾಗದ ಕಲಾವಿದರು ಸಂಘಟಿತರಾಗಿ ಕಲಾ ಸಂಘ /ಸಂಸ್ಥೆಗಳನ್ನು ಸ್ಥಾಪನೆ ಮಾಡಿಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬರುವ ಅವಕಾಶಗಳನ್ನು ಮತ್ತು ಸಹಾಯಧನವನ್ನು ಪಡೆಯುವಲ್ಲಿ ವಿಫಲರಾಗುತ್ತಿದ್ದು, ಗ್ರಾಮೀಣ ಭಾಗದ ಕಲಾವಿದರನ್ನು ಗುರುತಿಸಿ ಅವರಿಗೆ ಸಿಗಬೇಕಾದ ಅವಕಾಶ /ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ➢ ಗ್ರಾಮೀಣ ಕಲಾ ಸಂಸ್ಥೆಗಳು ಏರ್ಪಡಿಸುವ ಕಾರ್ಯಕ್ರಮಗಳಿಗೆ ಇಲಾಖೆಯಿಂದ ಪ್ರಾಯೋಜನೆ ಮಾಡಲಾಗುತ್ತಿದೆ.<br>➢ ಸಂಘ ಸಂಸ್ಥೆಗಳು ನಡೆಸುವ ಕಾರ್ಯಕ್ರಮಗಳಿಗೆ ಧನಸಹಾಯ ನೀಡಲಾಗುತ್ತಿದೆ.<br>➢ ಅಸಂಘಟಿತ ಕಲಾವಿದರಿಗೆ ವೇಷ ಭೂಷಣ, ವಾದ್ಯ ಖರೀದಿಗಾಗಿ ಆರ್ಥಿಕ ನೆರವು ನೀಡಲಾಗುತ್ತಿದೆ.<br>➢ ಈ ಎಲ್ಲಾ ಯೋಜನೆಗಳಿಗೆ ಸೇವಾ ಸಿಂಧು ಮೂಲಕ ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. |
| ಇ | ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿರುವ ಕಲಾ ಸಂಘ/ಸಂಸ್ಥೆಗಳು ಯಾವುವು; ಈ ಕಲಾ ಸಂಘ/ಸಂಸ್ಥೆಗಳು ಕಳೆದ 3 ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸಹಾಯಧನದ ಮೊತ್ತವೆಷ್ಟು? (ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಾಸನ ಜಿಲ್ಲೆಯ 7 ಸಂಘ ಸಂಸ್ಥೆಗಳಿಗೆ ಅನುದಾನ ನೀಡಿದ್ದು, ಸಂಸ್ಥೆಗಳ ಪಟ್ಟಿಯನ್ನು ಅನುಬಂಧದಲ್ಲಿರಿಸಿದೆ.<br>ಸದರಿ ಸಂಸ್ಥೆಗಳಿಗೆ ಒಟ್ಟು ರೂ.18.70 ಲಕ್ಷ ಅನುದಾನ ಬಡುಗಡೆ ಮಾಡಲಾಗಿದೆ. |

ಸಂಖ್ಯೆ: ಕಸಂವಾ 89 ಕವಿಸ 2021

(ವಿ. ಸುನಿಲ್ ಕುಮಾರ್)

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

## ಅನುಬಂಧ

### ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಾಸನ ಜಿಲ್ಲೆಯ ಸಂಘ-ಸಂಸ್ಥೆಗಳಿಗೆ ಅನುದಾನ ಮಂಜೂರು ಮಾಡಿದ ವಿವರ

| ಕ್ರ. ಸಂ. | ಸಂಘ-ಸಂಸ್ಥೆಗಳ ಹೆಸರು | 2018-19ರಲ್ಲಿ ಬಿಡುಗಡೆಯಾದ ಅನುದಾನ (ಲಕ್ಷಗಳಲ್ಲಿ) | 2019-20ರಲ್ಲಿ ಬಿಡುಗಡೆಯಾದ ಅನುದಾನ (ಲಕ್ಷಗಳಲ್ಲಿ) | 2020-21 ರಲ್ಲಿ ಬಿಡುಗಡೆಯಾದ ಅನುದಾನ (ಲಕ್ಷಗಳಲ್ಲಿ) | ಒಟ್ಟು ಮೊತ್ತ |
|---|---|---|---|---|---|
| 1. | ಶ್ರೀ ಶಾರದಾ ಕಲಾ ಸಂಘ(ರಿ), ವಿಜಯನಗರ ಬಡಾವಣೆ, 2ನೇ ಹಂತ ಬೇಲೂರು ರಸ್ತೆ, ಹಾಸನ ಜಿ॥ | 1.00 | 1.00 | 1.50 | 3.50 |
| 2. | ಶ್ರೀ ರಾಮಕಲಾವೃಂದ, ಶ್ರೀರಾಮನಗರ, ಕಟ್ಟೆಬೆಳಗುಲಿ, ಬಾಗಿವಾಳು ಅ॥, ಹೊಳೆನರಸೀಪುರ ತಾ॥ | - | 0.85 | - | 0.85 |
| 3. | ಕೆಂಚಾಂಬ ಕಲಾಸಂಘ, ಹರಿಹಳ್ಳಿ, ಆಲೂರು ತಾ॥, ಹಾಸನ ಜಿ॥ | 1.00 | 1.00 | 1.25 | 3.25 |
| 4. | ಕಲ್ಪಿತ ಜನಜಾಗೃತಿ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಸಂಸ್ಥೆ(ರಿ), ಶ್ರೀರಾಮನಗರ, ಕಟ್ಟೆಬೆಳಗುಲಿ, ಬಾಗಿವಾಳು ಅ॥, ಹೊಳೆನರಸೀಪುರ ತಾ॥ | - | 0.85 | 1.00 | 1.85 |
| 5. | ಶ್ರೀ ಚಾಮುಂಡೇಶ್ವರಿ ವಾಲ್ಮೀಕಿ ನಾಯಕ ಜನಾಂಗದ ಜನಪದ ಕಲಾಸಂಘ(ರಿ), ಮಾನವ ಬಂಧುತ್ವ ಕಛೇರಿ, ಹಳೆಪೋಸ್ಟ್ ಆಫೀಸ್ ರಸ್ತೆ, ಹಾಸನ | 2.00 | 1.00 | 3.00 | 6.00 |
| 6. | ಸಾವಿತ್ರಿಬಾಯಿ ಪುಲೆ ಸಾಂಸ್ಕೃತಿಕ ಮಹಿಳಾ ಸಂಘ (ರಿ), ಹಾಸನ | 1.00 | - | 0.50 | 1.50 |
| 7. | ನಾಗಭೂಮಿ ವಿವಿದೋದ್ದೇಶ ಅಭಿವೃದ್ಧಿ ಸಂಸ್ಥೆ, ಹಾಸನ | 1.00 | - | 0.75 | 1.75 |
| ಒಟ್ಟು ಮೊತ್ತ | | 6.00 | 4.70 | 8.00 | 18.70 |

13/1/2021

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು